4	Urban Ambedkar Scheme	7785	1771	0	9556
5	Indira Awas Yojana	111634	51958	102879	266471
6	PMGY Scheme	3960	2176	1393	7529
Total		**626715**	**192361**	**870271**	**1689346**

654 ಶ್ರೀ ಪಾಟೀಲ್ ಎ.ಎಸ್.(ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದೈಹಿಕ ಶಿಕ್ಷಕರ ಬಗ್ಗೆ ಪ್ರೊ: ಎಲ್.ಆರ್.ವೈದ್ಯನಾಥನ್ ಸಮಿತಿಯು ಸರ್ಕಾರಕ್ಕೆ ಯಾವಾಗ ವರದಿ ಸಲ್ಲಿಸಿದೆ; (ವರದಿಯ ವಿವರ ಒದಗಿಸುವುದು);

ಆ) ಈ ವರದಿ ಕಾರ್ಯರೂಪಕ್ಕೆ ಬಂದಿದೆಯೇ ಹಾಗೂ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ಪಠ್ಯಪುಸ್ತಕವನ್ನು ಸರ್ಕಾರ ಸಿದ್ದಪಡಿಸಿದೆಯೇ; ಸಿದ್ದಪಡಿಸಿದ್ದಲ್ಲಿ, ಯಾವಾಗ ಪುಸ್ತಕವನ್ನು ಬಿಡುಗಡೆ ಮಾಡಲಾಗುವುದು;

ಇ) 10ನೇ ತರಗತಿಯವರೆಗೆ ಕಡ್ಡಾಯವಾಗಿ ದೈಹಿಕ ಶಿಕ್ಷಣ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಕೈಗೊಂಡಿದ್ದಲ್ಲಿ, ದೈಹಿಕ ಶಿಕ್ಷಕರ ನೇಮಕಾತಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿವೆ; ಈ ಎಲ್ಲಾ ಶಾಲೆಗಳಲ್ಲಿ ಆಟದ ಮೈದಾನಗಳಿವೆಯೇ; ಇಲ್ಲದಿದ್ದಲ್ಲಿ, ಆಟದ ಮೈದಾನದ ನಿರ್ಮಾಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ ಹಾಗೂ ಪ್ರಸ್ತುತ ಎಷ್ಟು ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ; ಇನ್ನುಳಿದ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ನೇಮಕಾತಿಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರೊ: ಎಲ್.ಆರ್.ವೈದ್ಯನಾಥನ್ ಸಮಿತಿಯು ದಿ:11-12-2006 ರಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಸಂಕ್ಷಿಪ್ತ ವಿವರ ಕೆಳಕಂಡಂತಿದೆ.

1) ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪ.ಪೂ.ಕಾ.ಗಳಲ್ಲಿ ದೈಹಿಕ ಶಿಕ್ಷಣವನ್ನು ಇತರೆ ಪಠ್ಯ ವಿಷಯಗಳಂತೆ ಬೋಧನಾ ವಿಷಯವನ್ನಾಗಿ ಮಾಡುವುದು.

2) ಪ್ರಾಥಮಿಕ ಮತ್ತು ಪ್ರೌಢಶಾಲಾ ಮಟ್ಟದಲ್ಲಿ ದೈಹಿಕ ಶಿಕ್ಷಣದ ಅಭ್ಯಾಸ ವಿಷಯಗಳನ್ನು ಒಳಗೊಂಡಿರುವ ಜೀವ ವಿಜ್ಞಾನ ಎಂಬ ಶೀರ್ಷಿಕೆಯನ್ನು ಬದಲಾಯಿಸಿ, ದೈಹಿಕ ಶಿಕ್ಷಣ ಎಂಬ ಪದನಾಮದೊಂದಿಗೆ ಮುಂದುವರಿಸಿಕೊಂಡು ಹೋಗುವುದು.

3) ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಮತ್ತು ಪ.ಪೂ.ಕಾ.ಗಳಲ್ಲಿ ದೈಹಿಕ ಶಿಕ್ಷಣವನ್ನು ಕಡ್ಡಾಯವಾಗಿ ಬೋಧನಾ ವಿಷಯವನ್ನಾಗಿ ಮಾಡುವುದು.

4) ಪ್ರತಿಯೊಂದು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿಯೂ ಕಡ್ಡಾಯವಾಗಿ ಅರ್ಹ ದೈಹಿಕ ಶಿಕ್ಷಕರನ್ನು ನೇಮಕ ಮಾಡಬೇಕು. ವಿದ್ಯಾರ್ಥಿಗಳ ಸಂಖ್ಯೆ: 500ಕ್ಕಿಂತ ಹೆಚ್ಚು ಇರುವ ಪ್ರೌಢಶಾಲೆಗಳಲ್ಲಿ ಹೆಚ್ಚುವರಿಯಾಗಿ ಒಬ್ಬರು ದೈಹಿಕ ಶಿಕ್ಷಕರನ್ನು ನೇಮಕ ಮಾಡುವುದು.

5) ಪ್ರತಿಯೊಂದು ಪದವಿ ಪೂರ್ವ ಕಾಲೇಜಿನಲ್ಲಿಯೂ ಒಬ್ಬರು ಅರ್ಹ ದೈಹಿಕ ಶಿಕ್ಷಣ ಅಧ್ಯಾಪಕರನ್ನು ನೇಮಕ ಮಾಡುವುದು.

6) ಪ್ರಾಥಮಿಕ ಪ್ರೌಢಶಾಲೆಗಳ 5, 6 ಮತ್ತು 7ನೇ ತರಗತಿಯಲ್ಲಿ ದೈಹಿಕ ಶಿಕ್ಷಣದಲ್ಲಿಯೂ ಅನ್ಯ ವಿಷಯಗಳಲ್ಲಿರುವಂತೆ ಪರೀಕ್ಷೆಗಳನ್ನು ನಡೆಸಬೇಕು. ಪ್ರೌಢಶಾಲೆಗಳ 8 ಮತ್ತು 9ನೇ ತರಗತಿಗಳಲ್ಲಿ ಹಾಗೂ ಪ.ಪೂ.ಕಾಗಳಲ್ಲಿ 11ನೇ ತರಗತಿಯಲ್ಲಿ ದೈಹಿಕ ಶಿಕ್ಷಣ ವಿಷಯದಲ್ಲಿ ಪರೀಕ್ಷೆಗಳನ್ನು ನಡೆಸುವುದು.

7) ದೈಹಿಕ ಶಿಕ್ಷಣ ಮಟ್ಟ ಉತ್ತಮಪಡಿಸಿಕೊಳ್ಳಲು 12 ಅಂಶಗಳ ಕಾರ್ಯಕ್ರಮವನ್ನು ಹಾಗೂ ಶಿಫಾರಸ್ಸನ್ನು ಮಾಡಿದೆ. ಜಿಲ್ಲಾ ಮಟ್ಟದಲ್ಲಿ ಕ್ರೀಡಾ ಕೂಟಗಳನ್ನು ಯಾವ ರೀತಿ ಸಂಘಟಿಸಬೇಕು.

8) ತಾಲ್ಲೂಕು ದೈಹಿಕ ಶಿಕ್ಷಣ ಸಂಯೋಜಕರು, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು, ವಿಭಾಗೀಯ ದೈಹಿಕ ಶಿಕ್ಷಣ

ಅಧೀಕ್ಷಕರು, ಉಪ ನಿರ್ದೇಶಕರು, ದೈಹಿಕ ಶಿಕ್ಷಣ ಇವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ತಿಳಿಸಲಾಗಿದೆ. ಆಯುಕ್ತರ ಕಛೇರಿಯಲ್ಲಿ ಸಹ ನಿರ್ದೇಶಕರು. ದೈಹಿಕ ಶಿಕ್ಷಣ ಹುದ್ದೆಯನ್ನು ಸೃಜಿಸುವುದು ಇದರ ಕೆಳಗೆ ಸಹ ನಿರ್ದೇಶಕರು, ದೈಹಿಕ ಶಿಕ್ಷಣ ಮತ್ತು ಕ್ರೀಡೆ, ಹುದ್ದೆಯನ್ನು ಸೃಜಿಸಿ, ಪ್ರತಿ ಜಿಲ್ಲೆಗೆ ಒಬ್ಬಂತೆ 32 ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧಿಕಾರಿಗಳ ಹುದ್ದೆಗಳನ್ನು ಸೃಜಿಸುವಂತೆ ಶಿಫಾರಸ್ಸು ಮಾಡಿದೆ.

ಆ) ಹೌದು. ಕಾರ್ಯರೂಪಕ್ಕೆ ಬಂದಿದೆ.

6 ರಿಂದ 9ನೇ ತರಗತಿಗೆ ದೈಹಿಕ ಶಿಕ್ಷಣ ಪಠ್ಯಪುಸ್ತಕಗಳ ಮುದ್ರಣ ಕಾರ್ಯ ನಡೆಯುತ್ತಿದ್ದು, ಮುದ್ರಣದ ನಂತರ ಶಾಲೆಗಳಿಗೆ ಸರಬರಾಜು ಮಾಡಲಾಗುವುದು.

ಇ) ಹೌದು.

ಪ್ರೌಢ ಶಿಕ್ಷಣ :–

- ಹಿಂದುಳಿದ ತಾಲ್ಲೂಕುಗಳಲ್ಲಿನ ಸರ್ಕಾರಿ ಪ್ರೌಢಶಾಲೆಗಳಿಗೆ ಒಟ್ಟು 39 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು 2008–09ನೇ ಸಾಲಿನಲ್ಲಿ ಭರ್ತಿ ಮಾಡಲಾಗಿದೆ.
- ಪ್ರತಿಯೊಂದು ಸಾಲಿನಲ್ಲಿಯೂ ದೈಹಿಕ ಶಿಕ್ಷಕರ ನೇಮಕಾತಿ ಹಾಗೂ ವರ್ಗವಣೆಯ ಮೂಲಕ ಹುದ್ದೆಗಳನ್ನು ತುಂಬಲಾಗುತ್ತಿದೆ.
- 2009–10ನೇ ಸಾಲಿನಲ್ಲಿ 241 ದೈಹಿಕ ಶಿಕ್ಷಣ ಶಿಕ್ಷಕರು, ಗ್ರೇಡ್–1 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ದಿನಾಂಕ: 18–05–2009 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಪ್ರಾಥಮಿಕ :–

- ದಿನಾಂಕ: 14–08–2007 ರಲ್ಲಿ 1700 ಸರ್ಕಾರಿ ಪ್ರಾಥಮಿಕ ಶಾಲಾ ವಿಶೇಷ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲು ನಿರ್ದರಿಸಲಾಗಿದ್ದು, ಇದರಲ್ಲಿ 952 ದೈಹಿಕ ಶಿಕ್ಷಣ ಹುದ್ದೆಗಳನ್ನು ಸೃಜಿಸಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

- ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 82 ದೈಹಿಕ ಶಿಕ್ಷಕರ ಹುದ್ದೆಗಳು ಖಾಲಿಯಿದ್ದು, ಇದನ್ನು ಭರ್ತಿ ಮಾಡಲು ಈಗಾಗಲೇ ಕ್ರಮವಹಿಸಲಾಗಿದೆ. ಈ ಸಂಬಂಧ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಶೀಘ್ರದಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು.

ಈ) ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಸರ್ಕಾರಿ ಪ್ರೌಢಶಾಲೆಗಳ ವಿವರ ಕೆಳಕಂಡಂತಿದೆ.

ಶಾಲೆಗಳು	ಆಟದ ಮೈದಾನ ಇರುವ ಸಂಖ್ಯೆ.	ಆಟದ ಮೈದಾನ ಇಲ್ಲದಿರುವ ಸಂಖ್ಯೆ.	ಒಟ್ಟು ಶಾಲೆಗಳ ಸಂಖ್ಯೆ
ಸ.ಪ್ರೌ.ಶಾ.	22114	22735	44849
ಸ.ಪ್ರೌ.ಶಾ.	2581	1557	4138

ಶಾಲೆಗಳಿಗೆ ದಾನಿಗಳು ನಿವೇಶ ನೀಡಿದಲ್ಲಿ ಆಟದ ಮೈದಾನ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಉ)

- ರಾಜ್ಯದಲ್ಲಿ 1200 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇರುತ್ತವೆ.
- 05 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ.
- ಸರ್ಕಾರದ ಆದೇಶ ಸಂಖ್ಯೆ. ಇಡಿ 95 ಯೋಯೋಕ 2007, ದಿನಾಂಕ: 30–08–2007 ರಲ್ಲಿ 15 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಸೃಜಿಸಲಾಗಿದೆ. ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗುತ್ತಿದೆ. ಈ ಪ್ರಕ್ರಿಯೆ ಮುಗಿದ ನಂತರ ಮೇಲ್ಕಂಡ ಹುದ್ದೆಗಳನ್ನು ತುಂಬಲಾ ಗುವುದು. ಇನ್ನುಳಿದ ಸರ್ಕಾರಿ ಪದವಿ ಪೂರ್ವ ಕಾಲೇಜು ಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳನ್ನು ಸೃಜಿಸಬೇಕಾಗಿದೆ.